

ಹಣ ಇಟ್ಟುಕೊಂಡು ಓಡಾಡುವ ಬದಲು ಸಣ್ಣದೊಂದು ಕಾರ್ಡ್ ಇಟ್ಟುಕೊಂಡು, ಬೇಕಾದಾಗ ಬಳಸುವುದು ಹಿತವಾದ ಅನುಭವವೇ. ಅದರಲ್ಲೂ ಅದಕ್ಕಾಗಿ ಯಾವುದೇ ಶುಲ್ಕ ನೀಡಬೇಕಾಗಿಲ್ಲ ಎನ್ನುವುದು ಗೊತ್ತಾದ ಬಳಿಕ ಜನರು ಹೆಚ್ಚು ನಿರಾಳರಾದರು. ಇವತ್ತು ಬಹುತೇಕ ದೊಡ್ಡ– ಸಣ್ಣ ನಗರಗಳಲ್ಲಿ ಡೆಬಿಟ್ ಕಾರ್ಡ್ ಬಳಕೆ ಮಾಮೂಲಾಗಿದೆ. ದೇಶದಾದ್ಯಂತ ಸುಮಾರು 66 ಕೋಟಿ ಜನರು ಡೆಬಿಟ್ ಕಾರ್ಡ್ ಬಳಸುತ್ತಿದ್ದಾರೆ.

ಸಾಲ ಕೊಡುವುದು ಬ್ಯಾಂಕುಗಳ ಮೊದಲ ಆದ್ಯತೆ. ದೊಡ್ಡ ಮಟ್ಟದಲ್ಲಿ ಸಾಲ ಕೊಡುವುದಕ್ಕಿಂತ ಹೆಚ್ಚಾಗಿ ಸಣ್ಣ ಪ್ರಮಾಣದಲ್ಲಿ ಅವರವರ ಖಾತೆಯ ಶಕ್ತಿಗೆ ತಕ್ಕಂತೆ ಸಾಲ ನೀಡಿದರೆ, ಮರಳಿ ಪಡೆಯುವುದೂ ಸುಲಭ. ಹಾಗೆಂದೇ ಬ್ಯಾಂಕುಗಳು ಕ್ರೆಡಿಟ್ ಕಾರ್ಡ್ ವಹಿವಾಟು ಆರಂಭಿಸಿದವು. ಆದರೆ ಬ್ಯಾಂಕುಗಳ ನಿರೀಕ್ಷೆಯಂತೆ ಕ್ರೆಡಿಟ್ ಕಾರ್ಡ್ ವಹಿವಾಟು ಬೆಳೆಯಲಿಲ್ಲ. ಭಾರತದಲ್ಲಿ ಇವತ್ತು ಇರುವ ಒಟ್ಟು ಕ್ರೆಡಿಟ್ ಕಾರ್ಡ್‌ಗಳ ಸಂಖ್ಯೆ 2.4 ಕೋಟಿ ಮಾತ್ರ.

ಆದರೆ 140 ಕೋಟಿ ದಾಟಿದ ಜನಸಂಖ್ಯೆಯ ದೇಶದಲ್ಲಿ, 70 ಕೋಟಿ ಜನರು 35ಕ್ಕಿಂತ ಕಡಿಮೆ ವಯಸ್ಸಿನ ಯುವಜನರೇ ತುಂಬಿರುವ ದೇಶದಲ್ಲಿ ಕೇವಲ 66 ಕೋಟಿ ಜನರು ಡೆಬಿಟ್ ಕಾರ್ಡ್ ಬಳಸಿದರೆ ಸಾಕೆ? 'ಖಂಡಿತಾ ಸಾಕಾಗುವುದಿಲ್ಲ' ಎನ್ನುವುದು ಸರ್ಕಾರದ ನಿಲುವು.

ಜನರು ತಮ್ಮತಮ್ಮಲ್ಲೇ ನಗದು ಹಣಕಾಸಿನ ವಹಿವಾಟು ನಡೆಸುತ್ತಿದ್ದರೆ, ಬ್ಯಾಂಕುಗಳನ್ನು ಪೋಷಿಸುವವರು ಯಾರು? ಅದು ಮಾತ್ರವಲ್ಲ, ಎಲ್ಲರೂ ಬ್ಯಾಂಕುಗಳಲ್ಲಿ ತಮ್ಮ ಖಾತೆಗಳನ್ನು ತೆರೆದರೆ ಜನರ ಒಟ್ಟು ಹಣಕಾಸಿನ ವಹಿವಾಟು ಲೆಕ್ಕವೂ ಸರಕಾರಕ್ಕೆ ಸುಲಭವಾಗಿಯೇ ಸಿಗುತ್ತದೆ. ಹೀಗೆ ಲೆಕ್ಕ ಸಿಕ್ಕರೆ ತೆರಿಗೆಯ ವ್ಯಾಪ್ತಿಗೆ ಎಲ್ಲರನ್ನು ಸಿಲುಕಿಸುವುದು ಸುಲಭ.

ಆದರೆ ಜನರನ್ನು ಬ್ಯಾಂಕುಗಳತ್ತ ನೂಕುವುದು ಹೇಗೆ?

ಅದಕ್ಕೆಂದೇ ಸರ್ಕಾರ ಮೊದಲು ಪ್ರಧಾನಮಂತ್ರಿ ಜನಧನ್ ಉಳಿತಾಯ ಖಾತೆಗಳ ಯೋಜನೆಯನ್ನು ಘೋಷಿಸಿತು. ಯಾರೇ ಆಗಲಿ ಬ್ಯಾಂಕ್‌ನಲ್ಲಿ ಒಂದು ಪೈಸೆಯನ್ನೂ ಇಡದೆ ತಮ್ಮ ಖಾತೆಗಳನ್ನು ಆರಂಭಿಸಬಹುದು ಎಂದಿತು. ಈ ಖಾತೆದಾರರಿಗೆ ರುಪೇ ಎಟಿಎಂ ಕಾರ್ಡ್‌ಗಳನ್ನು ವಿತರಿಸಿತು. ಈ ಕಾರ್ಡ್‌ಗಳ ಮೂಲಕ ಹಣವನ್ನು ಡ್ರಾ ಮಾಡುವುದು ಮಾತ್ರವಲ್ಲ, ಮಳಿಗೆಗಳಲ್ಲಿ ಖರೀದಿಯನ್ನೂ ಮಾಡಬಹುದು ಎಂದು ಪ್ರಕಟಿಸಿತು. ಜತೆಗೆ ಖಾತೆದಾರರಿಗೆ ಒಂದು ಪೈಸೆ ಖರ್ಚೂ ಇಲ್ಲದೆ ಒಂದು ಲಕ್ಷ ರೂಪಾಯಿಗಳ ಅಪಘಾತ ವಿಮೆಯನ್ನೂ ಪ್ರಕಟಿಸಿತು.

ಸರ್ಕಾರದ ಈ ಯೋಜನೆ ತಕ್ಕಮಟ್ಟಿಗೆ ಯಶಸ್ಸನ್ನೂ ಪಡೆಯಿತು. ಖಾತೆಗಳಿಲ್ಲದ ಕೋಟ್ಯಂತರ ಜನರು ಬ್ಯಾಂಕಿಗೆ ಧಾವಿಸಿದರು. 2016ರ ಡಿಸೆಂಬರ್ ವೇಳೆಗೆ ಸರ್ಕಾರ ನೀಡಿರುವ ಲೆಕ್ಕದ ಪ್ರಕಾರ, ದೇಶದಲ್ಲಿ ಒಟ್ಟು 25 ಕೋಟಿ ಜನರು ಪ್ರಧಾನ್‌ಮಂತ್ರಿ ಜನಧನ್ ಯೋಜನೆಯ ಖಾತೆ ಹೊಂದಿದ್ದಾರೆ. ಸುಮಾರು 74,000 ಕೋಟಿ ರೂಪಾಯಿ ಹಣ ಆ ಖಾತೆಗಳಲ್ಲಿದೆ.

ಜನಧನ್ ಖಾತೆಯ ಬಳಿಕ ಎರಡನೇ ಹಂತವಾಗಿಯೇ ಈಗ ಐದುನೂರು ಮತ್ತು ಸಾವಿರ ರೂಪಾಯಿ ನೋಟುಗಳನ್ನು ಅಮಾನ್ಯ ಮಾಡಲಾಗಿದೆ ಎನ್ನುವುದು ಸರಕಾರದ 'ಅರ್ಥ ಕಾರ್ಯತಂತ್ರ'ವನ್ನು ಬಲ್ಲ ಅರ್ಥಶಾಸ್ತ್ರಜ್ಞರ ಅಂಬೋಣ.

